

ಎಂದಿಗೂ ಬತ್ತದ ಪುಷ್ಕರಣಿಗಳು.

ಎರಡನೇ ಸುತ್ತಿನ ಕೋಟೆ– ಸುಮಾರು 2–3 ಎಕರೆ ಪ್ರದೇಶವನ್ನು ಬಳಸಿದ್ದು, ದೊಡ್ಡ ದೊಡ್ಡ ಕಲ್ಲುಗಳಿಂದ ನಿರ್ಮಿಸಲಾಗಿದೆ. ಈ ಕೋಟೆಗೂ ಉತ್ತರ ಮತ್ತು ದಕ್ಷಿಣದಲ್ಲಿ ಎರಡು ಬಾಗಿಲುಗಳಿವೆ. ಅಲ್ಲಲ್ಲಿ ನಿಯಮಿತ ಅಂತರದಲ್ಲಿ ನಾನಾ ಆಕೃತಿಯ ಬುರುಜುಗಳನ್ನು ನಿರ್ಮಿಸಲಾಗಿದೆ. ಮೊದಲನೆಯ ಕೋಟೆಗಿಂತ ಈ ಗೋಡೆಗಳು ಹೆಚ್ಚು ಎತ್ತರವಾಗಿವೆ.

ದೇವಾಲಯದ ಮುಂಭಾಗದಲ್ಲಿರುವ ನಂದಿ ವಿಗ್ರಹವು ಸುಮಾರು 10 ಅಡಿ ಉದ್ದ, 10 ಅಡಿ ಅಗಲವಿದೆ. ಗುಡ್ಡದಲ್ಲಿ ಬಂಡೆಗಳನ್ನು ಕೊರೆದು ಬೃಹದಾಕಾರದ ತೊಟ್ಟಿಗಳನ್ನು ನಿರ್ಮಿಸಲಾಗಿದೆ. ರಾಜ ಕುಟುಂಬದವರ ಬಳಕೆಗೆ ಈ ತೊಟ್ಟಿಗಳಲ್ಲಿ ನೀರು ಸಂಗ್ರಹವಾಗುತ್ತಿದ್ದಿರಬೇಕು ಎಂದು ಪೂಜಾರಿ ಗೋಪಾಲಜ್ಜ ಹೇಳುತ್ತಾರೆ.

ಪುಷ್ಕರಣಿಗಳು:– ಗುಡ್ಡದ ತಪ್ಪಲಿನಲ್ಲಿ ಎರಡು ಪುಷ್ಕರಣಿಗಳಿವೆ. ಎಲ್ಲ ಋತುಗಳಲ್ಲೂ ಅವುಗಳಲ್ಲಿ ನೀರು ಸಂಗ್ರಹವಾಗುತ್ತಿತ್ತು. ಮಳೆಗಾಲದಲ್ಲಿ ಇವುಗಳು ತುಂಬಿದರೆ, ಕೆಳ ದೇವಾಲಯದಲ್ಲಿ ನೀರು ಸಂಗ್ರಹವಾಗುವ ವ್ಯವಸ್ಥೆ ಇತ್ತು.

ದೇವಾಲಯದ ಮೇಲ್ಛಾವಣಿಯಾಗಿರುವ ಬಂಡೆಯ ಮೇಲ್ಭಾಗದಲ್ಲಿ ಕೆಲಸಗಾರರ ಶ್ರಮದಿನಗಳ ಲೆಕ್ಕವನ್ನು ಗುರುತಿಡಲು ಕೊರೆದಿರುವ ಉದ್ದಗೆರೆಗಳ ಕೆಲವು ಅಡ್ಡಸಾಲುಗಳನ್ನು ಕಾಣಬಹುದು. ಅವುಗಳ ಪಕ್ಕದಲ್ಲಿಯೇ ಕೆಲವೆಡೆ ಅದೇ ಕಾಲದ ಕನ್ನಡದ ಕೆಲವು ಬಿಡಿ ಅಕ್ಷರಗಳೂ ಇವೆ. ಬಹುಶಃ ಅವು ಕೆತ್ತನೆ ನಡೆಸಿದವರ ಹೆಸರು ಇರಬಹುದು. ಅಥವಾ ಕನ್ನಡದ ಪ್ರಾರಂಭದ ಅಕ್ಷರಗಳಿರಬಹುದು. ಯಾವುದೂ ಖಚಿತವಿಲ್ಲ.

ಚಿತ್ರದುರ್ಗ ಜಿಲ್ಲೆಯ ಶಿಲ್ಪವೈವಿಧ್ಯಕ್ಕೆ ಸಾಕ್ಷಿಯಾಗಿರುವ ರಾಮಲಿಂಗೇಶ್ವರ ಗುಹಾಂತರ ದೇವಾಲಯ ಮತ್ತು ಕೋಟೆಯನ್ನು ರಕ್ಷಣೆ ಮಾಡುವ ಅಗತ್ಯವಿದೆ. ಇಲ್ಲಿಗೆ ಬರುವ ಭಕ್ತರು ಕಲ್ಲುಗಳಿಂದ ಪುಟ್ಟ ಗೂಡು, ಮನೆಗಳನ್ನು ಕಟ್ಟುವ ಮೂಲಕ ಬಹುತೇಕ ಸ್ಥಳವನ್ನು ಆಕ್ರಮಿಸಿಕೊಂಡಂತಾಗಿದೆ. ಇದರ ಬದಲು ಕೋಟೆಯ ಸುತ್ತ ಗಿಡ ನೆಡುವ ಹರಕೆ ಹೊತ್ತರೆ ಎಷ್ಟು ಹಿತಕರ ಎನ್ನುವುದನ್ನು ಆಲೋಚಿಸಬೇಕು.

ಹೋಗುವುದು ಹೇಗೆ?: ಚಳ್ಳಕೆರೆಯಿಂದ ಬಳ್ಳಾರಿ ರಸ್ತೆಯಲ್ಲಿ ಸ್ವಲ್ಪ ದೂರ ಕ್ರಮಿಸಿದರೆ ಶ್ರೀ ಕ್ಷೇತ್ರ ನಾಯಕನಹಟ್ಟಿ ಶ್ರೀ ಗುರುತಿಪ್ಪೇರುದ್ರಸ್ವಾಮಿ ಕ್ಷೇತ್ರದ ಹೋಗುವ ದಾರಿ ಕಾಣಸಿಗುತ್ತದೆ. ಅಲ್ಲೇ ಸ್ವಲ್ಪ ದೂರದಲ್ಲಿ ಹೊಸಗುಡ್ಡವಿದೆ.



ದೇವಾಲಯದಲ್ಲಿ ಒಳ ನೋಟ.